## ಕಂಡಿದ್ದೀರಾ ಕೋಲ್ಜ?

ಹೆಜ್ಜೇನು, ತುಡುವೆ ಜೇನುಗೂಡಿನ ಸಿಹಿ ತುಪ್ಪದ ರುಚಿ ಕಂಡವರಿಗೆ ಅಪರೂಪವಾಗಿ ಕರಾವಳಿಯಲ್ಲಿರುವ ಕೋಲ್ಜ ಜೇನಿನ ಪರಿಚಯ ಇರಲಿಕ್ಕಿಲ್ಲ. ಹೆಚ್ಚಾಗಿ ಮನುಷ್ಯವಾಸದ ಬಳಿ ಹೂಗಿಡಗಳ ಕೊಂಬೆಗಳಿಗೆ ದೊಡ್ಡ ದೋಸೆಯಂತಹ ಒಂದೇ ಎರಿ ಕಟ್ಟಿ, ಅರ್ಧದಲ್ಲಿ ಮೊಟ್ಟೆಯಿರಿಸಿ ಇನ್ನರ್ಧದಲ್ಲಿ ಜೇನುತುಪ್ಪ ತುಂಬಿಸುತ್ತದೆ. ಇದರಲ್ಲಿ ದುಂಡಗಿನ ಸಣ್ಣ ಕೋಲ್ಜ ಮತ್ತು ದೊಡ್ಡದಾದ ಎಮ್ಮೆ ಕೋಲ್ಜಗಳೆಂಬ ಎರಡು ಜಾತಿಗಳಿದ್ದು ಇಲ್ಲಿರುವುದು ಎಮ್ಮೆ ಕೋಲ್ಜ. ಕಾಲು ಲೀಟರ್ ತುಪ್ಪ ಸಿಗುತ್ತದೆ. ಬಣ್ಣ ಬಿಳಿ. ಮದ್ದಡ್ಕದ ಪೃಥ್ವಿ ಗೋವಿಂದ ಭಟ್ಟರ ದಾಸವಾಳ ಗಿಡದಲ್ಲಿ ಇದು ಕಂಡುಬಂದಿದೆ.

—ಪ. ರಾಮಕೃಷ್ಣಶಾಸ್ತ್ರಿ





## ನೋಟಿನ ತಟ್ಟೆ

ಹಿಮಾಚಲ ಪ್ರದೇಶದ ಕಾಂಗರಾ ಎಂಬ ನಗರದಲ್ಲಿ ವಜ್ರೇಶ್ವರಿ ದೇವಿಯ ದೇವಸ್ಥಾನವಿದೆ. ಇದು ಪಾರ್ವತಿ ದೇವಿಯ ಶಕ್ತಿಪೀಠಗಳಲ್ಲಿ ಪ್ರಮುಖವಾದ ದೇವಸ್ಥಾನವೆಂಬ ಖ್ಯಾತಿಯನ್ನು ಪಡೆದಿದೆ. ಈ ದೇವಸ್ಥಾನದ ಕಟ್ಟಡವನ್ನು ಹಿಂದು, ಮುಸ್ಲಿಮ್ ಮತ್ತು ಸಿಖ್ ಶೈಲಿಯಲ್ಲಿ ನಿರ್ಮಿಸಲಾಗಿದೆ. ಈ ದೇವಸ್ಥಾನಕ್ಕೆ ಹೋಗುವ ಮಾರ್ಗದಲ್ಲಿ ದೇವರಿಗೆ ಅರ್ಪಿಸಲು ಹಣ್ಣುಕಾಯಿ, ಹೂವು, ಪಳಪಳ ಹೊಳೆಯುವ ಬಟ್ಟೆಗಳಲ್ಲದೇ ಕಲಾತ್ಮಕವಾಗಿ ಜೋಡಿಸಿದ ಗರಿಗರಿ ನೋಟಿನ ತಟ್ಟೆಗಳು ಸಿಗುತ್ತವೆ. ರೂ. 10, 20, 50ರ ಮುಖಬೆಲೆಯ ನೂರಾರು ನೋಟುಗಳನ್ನು ಕಲಾತ್ಮಕವಾಗಿ ಜೋಡಿಸಿ ತಯಾರಿಸಿದ ಈ ನೋಟಿನ ತಾಟುಗಳನ್ನು ಕೊಂಡು ದೇವಿಗೆ ಸಮರ್ಪಿಸುವ ವಾಡಿಕೆ ಇದೆ.

—ವಾರಿಜಾ ಜಗದೀಶ್, ಶಿವಮೊಗ್ಗ

## ಬಿರಿದ ಬಳ್ಳಿ ಹೂವು

ಮನೆಯಂಗಳದಲ್ಲಿ ಹೂಗಿಡಗಳಿದ್ದರೆ ಆ ಮನೆಯ ಆವರಣದ ಸೌಂದರ್ಯವನ್ನು ಹೆಚ್ಚಿಸುತ್ತದೆ. ವಿವಿಧ ಜಾತಿಯ ಬಳ್ಳಿಗಳಿಗೂ ಅಂಗಳದ ಅಂಚಿನಲ್ಲಿ ಅರಳಿಕೊಂಡಿರುತ್ತದೆ. ಚೂಪಾದ ಎಲೆಯ ಹಸಿರು ಬಳ್ಳಿಯೊಂದು ಮೈ ತುಂಬಾ ಬಿಳಿಯ ಹೂ ಹೊತ್ತು ಮನೆಯ ಮುಂದಿನ ಪ್ರವೇಶದ್ವಾರಕ್ಕೆ ತೋರಣವಾಗಿ ಕಂಡುಬಂದದ್ದು ಹೀಗೆ. ಉತ್ತರಕನ್ನಡದ ಯಲ್ಲಾಪುರ ತಾಲ್ಲೂಕಿನ ವಜ್ರಳ್ಳಿ ಸಮೀಪದ ಕೃಷಿಕರ ಮನೆಯ ಈ ಹಸಿರು ತೋರಣದ ಅಲಂಕಾರ ಮನೆಗೆ ಬಂದವರನ್ನು ಮೊದಲಾಗಿ ಗಮನಸೆಳೆಯುತ್ತದೆ. ಯಾವುದೇ ಪರಿಮಳ ಬೀರದ ಈ ಬಳ್ಳಿ ಬೀಜದಿಂದಲೇ ಪ್ರಸರಣಗೊಂಡು ಎಲ್ಲಾ ಕಡೆ ಸುಲಭವಾಗಿ ಹುಟ್ಟಿಕೊಳ್ಳುತ್ತದೆ.

—ದತ್ತಾತ್ರೇಯ ಭಟ್ಟ,ಕಣ್ಣಿಪಾಲ ಯಲ್ಲಾಪುರ

